

# ಮಿಂಚು

■ ತಮ್ಮಣ್ಣ ಬೀಗಾರ
ಕಲೆ: ಸಂತೋಷ್ ಸಸಿಹಿತ್ಲು

‘ಬಾಲು, ಏನು ಮಾಡ್ತಾ ಇದ್ದೀಯಾ... ಆಗಿನಿಂದ ನೋಡ್ತಾ ಇದ್ದೇನೆ. ಹೊರಗೆ ಹೋಗಿ ನಿಂತಿದ್ದೀಯ. ಶಾಲೆಯಲ್ಲಿ ಏನು ಹೇಳಿದ್ದಾರೆ? ಈ ದಿನದ ಬರೆಯುವ ಕೆಲಸ ಮಾಡಿ ಮುಗಿಸಿಬಿಟ್ಟರೆ ಆಗಿಹೋಯಿತಾ... ಒಂದಿಷ್ಟು ಓದಿಕೊಳ್ಳಬಾರದ?’ ಎಂದು ಆಕಾಶದಲ್ಲಿ ಗುಡುಗುಡಿಸಿದ ಹಾಗೆ ಅಮ್ಮ ಒಂದೇ ಸಮನೆ ಗುಡುಗುಡು ಮಾತಾಡುತ್ತಿದ್ದಳು. ನಾನು ಇನ್ನು ಸುಮ್ಮನೆ ಇದ್ದರೆ ಈ ಗುಡುಗುಡು ಇನ್ನೂ ದೊಡ್ಡದಾಗುತ್ತದೆ. ಅದು ಅಪ್ಪನವರೆಗೂ ಕೇಳಿ ಅವನೂ ಧ್ವನಿಗೂಡಿಸತೊಡಗುತ್ತಾನೆ ಎಂದುಕೊಂಡು ‘ಈಗ ತಾನೆ ಬರೆದು ಮುಗಿಯಿತು. ನಾನೇನು ಆಟ ಆಡಲು ಹೋಗಿಲ್ಲ. ಆಕಾಶ ನೋಡುತ್ತಾ ಇದ್ದೇನೆ. ಸ್ವಲ್ಪ ಹೊತ್ತು ಬಿಟ್ಟು ಬಂದು ಓದಿಕೊಳ್ಳುತ್ತೇನೆ’ ಎಂದು ಹೇಳಿ ಅಮ್ಮನ ಬಾಯಿ ಮುಚ್ಚಿಸಲು ನೋಡಿದೆ. ‘ಆಕಾಶದಲ್ಲಿ ಆಗಿನಿಂದ ಮೋಡ ತುಂಬಿಕೊಂಡಿದೆ. ಏನು ನೋಡುತ್ತೀಯಾ ನೀನು?’ ಅಂತ ಪ್ರಶ್ನೆ ಬಂದೇ ಬಿಟ್ಟಿತು. ಅರೆ ಇವ್ಳ, ನಾನು ಒಳಗೆ ಬರದೆ ಬಿಡುವ ಹಾಗೆ ಕಾಣುವುದಿಲ್ಲ ಎಂದುಕೊಳ್ಳುತ್ತಾ... ‘ಹಾಗಲ್ಲ ಅಮ್ಮ, ನಮ್ಮ ಸರ್ ಹೇಳಿದ್ದಾರೆ... ನಾಳೆ ನಾವು ಮೋಡ ತುಂಬಿದ ಆಕಾಶ ಎನ್ನುವ ವಿಷಯದ ಮೇಲೆ ಕಿರು ಟಿಪ್ಪಣಿ ಬರೆದು ತೋರಿಸಬೇಕಂತೆ. ಅದಕ್ಕೇ ನೋಡುತ್ತಾ ಇದ್ದೇನೆ’ ಅಂದೆ. ಶಾಲೆಯ ಸರ್ ಹೇಳಿದ್ದಾರೆ ಅಂದಮೇಲೆ ಅಮ್ಮ ಸುಮ್ಮನಾದಳು. ನಾನು ಖುಷಿಗೊಂಡೆ.

ಆದರೆ ಹೇಗೆ ನನ್ನ ಬಾಯಿಂದ ಮೋಡ ತುಂಬಿದ ಆಕಾಶ ಎಂದು ಬಂತು ಎನ್ನುತ್ತ ಆಕಾಶದ ಕಡೆಗೆ ನೋಡಲು ತೊಡಗಿದೆ. ಹೌದಲ್ಲ, ಮೋಡ ಆಕಾಶದಲ್ಲಿ ತುಂಬಿ ಹೋಗಿದೆ ಅಂದುಕೊಂಡಿದ್ದೆ. ಆದರೆ ಇದೀಗ ಮೋಡ ಹಾರಿ ಹಾರಿ ಬಂದು ಆಕಾಶದಲ್ಲಿ ತುಂಬಿಕೊಳ್ಳುತ್ತಾ ಇದೆ. ಮಳೆಗಾಲದಲ್ಲಾದರೆ ಆಕಾಶದ ಬಣ್ಣವೇ ಕಪ್ಪೇನೋ ಎನ್ನುವ ಹಾಗೆ ಆಕಾಶವೆಲ್ಲ ಕಪ್ಪಾಗಿ ಕಾಣುತ್ತದೆ. ಆದರೆ ಈಗ ಮಳೆಗಾಲವಲ್ಲ. ಮಳೆಗಾಲಕ್ಕಿಂತಲೂ ಮೊದಲು ಒಂದೊಂದು ಸಾರಿ ಒಮ್ಮೆಲೇ ಮೋಡಕವಿದು ಮಳೆ ಬರುತ್ತದೆಯಲ್ಲ ಅಂತಹ ದಿನ.

ಒಂದು ಕಡೆಯಿಂದ ಕರಿ ಕರಿ ಮೋಡ ರಾಶಿ ರಾಶಿಯಾಗಿ ಬರುತ್ತಿದ್ದರೆ... ಇನ್ನೊಂದು ಕಡೆ ಬಿಳಿ ಮೋಡದ ಪರ್ವತದಂತಹ ರಾಶಿ! ಕರಿ ಮೋಡದ ಅಂಚಿಗೆ ಬಿಸಿಲು ತಾಗಿ ಹೊಳೆಯುತ್ತಿದ್ದರೆ ಅದನ್ನೇ ನೋಡುತ್ತಾ ಇರಬೇಕು ಅನಿಸುತ್ತಿತ್ತು. ಆಗಲೇ ಸೂರ್ಯ ಪಶ್ಚಿಮದ ಅಂಚಿನ ಕಡೆಗೆ ಹೋಗತೊಡಗಿದ್ದ. ಸೂರ್ಯ ಈಗ ಕಾಣುತ್ತಿಲ್ಲವಾದರೂ ಮೋಡಕ್ಕೆ ಎಷ್ಟೊಂದು ಬಣ್ಣ ಬಳಿದಿದ್ದಾನೆ. ಒಂದಿಷ್ಟು ಕೆಂಪು, ಒಂದಿಷ್ಟು ಬಂಗಾರದ ಬಣ್ಣ... ಬಹಳ ಹೊತ್ತು ಅವು ಹಾಗೆಯೇ ಉಳಿಯುವುದಿಲ್ಲ. ಅವೂ ಬಣ್ಣ ಬದಲಾಯಿಸುತ್ತಿವೆ. ಎಷ್ಟೊಂದು ಚೆಂದ ಕಾಣುತ್ತಿವೆ ಅನಿಸಿ ಹಿತವೆನಿಸಿತು.

ಆಗಲೇ ದೂರದಲ್ಲಿ ಕಾಣುವ ಗುಡ್ಡಗಳ ಮರಗಳ ಸಾಲಿನ ಮೇಲೆ ಚೆಕ್ ಚೆಕ್ ಎಂದು ಬೆಳಕು ಮೂಡಲು ತೊಡಗಿತ್ತು. ಅದು ಮಿಂಚು ಎಂದು ನನಗೆ ಗೊತ್ತು. ಮಿಂಚು ಚಕ್ಕನೆ ಕಂಡು ಮಾಯವಾಗುತ್ತದೆ. ಅದು ಬಳ್ಳಿಯಂತೆ ವಿಸ್ತರಿಸಿ ಕಾಣದಾಗುವುದೂ ಇದೆ. ಇದೆಲ್ಲಾ